# ಪ್ರಲಾಪ ರಹಿತ ಕಲಾಪ ಆರಂಭ

## ಇಂದಿನ ಕಲಾಪದಲ್ಲಿ ತಾರಕಕ್ಕೇರಲಿದೆ ಚರ್ಚೆ



ಸೋಮವಾರ ಪ್ರಾರಂಭವಾದ ಮೊದಲ ದಿನದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲ ವಿ.ಆರ್. ವಾಲಾ ಮಾತನಾಡಿದರು. ವಿಧಾನಸಭೆ ಮತ್ತು ಪರಿಷತ್‌ನ ಸ್ಪೀಕರ್‌ಗಳು ಉಪಸ್ಥಿತರಿದ್ದರು.

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ರಾಜ್ಯದಲ್ಲಿ ಬಿಜೆಪಿ ಸರಕಾರ ಅಧಿಕಾರಕ್ಕೆ ಬಂದ ಬಳಿಕ ನಡೆಯುತ್ತಿರುವ ಮೊದಲ ಪೂರ್ಣ ಪ್ರಮಾಣದ ಅಧಿವೇಶನಕ್ಕೆ ರಾಜ್ಯಪಾಲರ ಭಾಷಣದೊಂದಿಗೆ ಸೋಮವಾರ ಚಾಲನೆ ಸಿಕ್ಕಿದೆ.

ಸೋಮವಾರ ಬೆಳಗ್ಗೆ 11ಗಂಟೆಗೆ ವಿಧಾನಸಭೆಗೆ ಆಗಮಿಸಿದ ರಾಜ್ಯಪಾಲ ವಿ.ಆರ್.ವಾಲಾ ಅವರು, ಉಭಯ ಸದನ ಸದಸ್ಯರನ್ನು ಉದ್ದೇಶಿಸಿ ಭಾಷಣ ಮಾಡಿದರು. 67 ಅಂಶಗಳ ಭಾಷಣದಲ್ಲಿ ವಿವಿಧ ಇಲಾಖೆಗಳಲ್ಲಿ ಸರಕಾರದ ಸಾಧನೆಯ ಬಗ್ಗೆ ಪ್ರಸ್ತಾಪಿಸಿದರು. ರಾಜ್ಯಪಾಲರ ಭಾಷಣಕ್ಕೆ ಪ್ರತಿಪಕ್ಷಗಳು 'ಪೊಳ್ಳು ಭಾಷಣವೆಂದು' ಜರಿದರೆ, ಆಡಳಿತಾರೂಢ ಬಿಜೆಪಿ ಸರಕಾರದ ಒಂದು ವರ್ಷದ ಸಾಧನೆ ಹಾಗೂ ಮುಂದಿನ ದಿನಗಳ ದಿಕ್ಸೂಚಿ ಭಾಷಣವೆಂದು ವರ್ಣಿಸಿದ್ದಾರೆ.

ಇದಕ್ಕೂ ಮೊದಲು ರಾಜ್ಯಪಾಲರನ್ನು ಸಾಂಪ್ರದಾಯಿಕವಾಗಿ ಮುಖ್ಯಮಂತ್ರಿ ಯಡಿಯೂರಪ್ಪ, ಉಭಯ ಸದನಗಳ ಸ್ಪೀಕರ್, ಕಾರ್ಯದರ್ಶಿಗಳು ಹಾಗೂ ಮಾರ್ಷಲ್‌ಗಳನ್ನು ಸ್ವಾಗತಿಸಿದರು. ಸುಮಾರು 20 ನಿಮಿಷ ಮಾತನಾಡಿದ ರಾಜ್ಯಪಾಲರನ್ನು ಬೀಳ್ಕೊಟ್ಟ ಬಳಿಕ, ಉಭಯ ಸದನಗಳಲ್ಲಿ ಅಗಲಿದ ಗಣ್ಯರಿಗೆ ಸಂತಾಪ ಸೂಚಿಸಿ ಮಂಗಳವಾರಕ್ಕೆ ಸಭೆ ಮುಂದೂಡಲಾಯಿತು.

ಇದಕ್ಕೂ ಮೊದಲು ವರ್ಷದ ಮೊದಲ ಅಧಿವೇಶನದಲ್ಲಿ ಆಡಳಿತ ಹಾಗೂ ಪ್ರತಿಪಕ್ಷದ ಶಾಸಕರು, ಸಚಿವರು ಉತ್ಸಾಹದಿಂದಲೇ ಭಾಗವಹಿಸಿದ್ದರು.

→5

### ಹಿಂದಿ ಭಾಷಣಕ್ಕೆ ಆಕ್ಷೇಪ

ರಾಜ್ಯಪಾಲರು ಭಾಷಣ ಆರಂಭಿಸುತ್ತಿದ್ದಂತೆ ಭಾಷಣದ ಇಂಗ್ಲಿಷ್, ಹಿಂದಿ ಹಾಗೂ ಕನ್ನಡದ ಪ್ರತಿಗಳನ್ನು ಸದನದಲ್ಲಿದ್ದ ಸದಸ್ಯರಿಗೆ ಹಂಚಲಾಯಿತು. ಆದರೆ ಈ ವೇಳೆ ಜೆಡಿಎಸ್ ಶಾಸಕ ಅನ್ನದಾನಿ ಅವರಿಗೆ ಕನ್ನಡ ಪ್ರತಿ ಸಿಕ್ಕಿರಲಿಲ್ಲ. ಅದಕ್ಕೆ ರಾಜ್ಯಪಾಲರ ಭಾಷಣದ ಮಧ್ಯೆಯೇ ಭಾಷಣವೂ ಹಿಂದಿಯಲ್ಲಿದೆ ಕನ್ನಡ ಪುಸ್ತಕ ನೀಡಿ. ಇಲ್ಲದಿದ್ದರೆ ತಮಗೆ ಅರ್ಥವಾಗುವುದಿಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು. ಈ ವೇಳೆ ಮಾಜಿ ಸಿಎಂ ಎಚ್.ಡಿ. ಕುಮಾರಸ್ವಾಮಿ ಕುಳಿತುಕೊಳ್ಳುವಂತೆ ಸಂಜ್ಞೆ ಮಾಡಿದರು.



"ರಾಜ್ಯಪಾಲರ ಭಾಷಣ ಗೊತ್ತು ಗುರಿ ಇಲ್ಲದ ಭಾಷಣ. ಆರು ತಿಂಗಳಲ್ಲಿ ಬಿಜೆಪಿ ಸರಕಾರ ಏನು ಸಾಧನೆ ಮಾಡಿದೆ ಎನ್ನುವ ಬಗ್ಗೆ ಏನು ಮಾಹಿತಿಯಿಲ್ಲ. ಸಮಿಶ್ರ ಸರಕಾರದ ಯೋಜನೆಗಳ ಬಗ್ಗೆ ಮಾತನಾಡಿದ್ದಾರೆ. ಪ್ರವಾಹ ಪೀಡಿತರಿಗೆ ಪರಿಹಾರ ಕೊಡುವ ವಿಚಾರದಲ್ಲಿ ರಾಜ್ಯಪಾಲರಿಂದ ಸುಳ್ಳು ಮಾತನ್ನು ಹೇಳಿಸಿದ್ದಾರೆ. ಇದೊಂದು ಸಪ್ಪೆ ಭಾಷಣವಾಗಿದ್ದು, ಬಜೆಟ್ ಸಹ ಇದೇ ರೀತಿ ಇರುವ ಸಾಧ್ಯತೆ ಇದೆ.

- ಸಿದ್ದರಾಮಯ್ಯ ಪ್ರತಿಪಕ್ಷ ನಾಯಕ



"ಬಜೆಟ್ ಅಧಿವೇಶನಕ್ಕೂ ಮುನ್ನ ಎರಡೂ ಸದನಗಳನ್ನು ಉದ್ದೇಶಿಸಿ ರಾಜ್ಯಪಾಲರು ಮಾಡಿದ ಭಾಷಣ ಕಟ್ ಆ್ಯಂಡ್ ಪೇಸ್ಟ್ ಭಾಷಣ. ಸಮ್ಮಿಶ್ರ ಸರಕಾರದ ಕಾರ್ಯಕ್ರಮ ಗಳನ್ನು, ಸಾಧನೆಗಳನ್ನು 12 ಪುಟಗಳಲ್ಲಿ ಬರೆದುಕೊಟ್ಟು ರಾಜ್ಯಪಾಲರಿಂದ ಓದಿಸಲಾಗಿದೆ.

- ಎಚ್.ಡಿ.ಕುಮಾರಸ್ವಾಮಿ ಮಾಜಿ ಮುಖ್ಯಮಂತ್ರಿ

ವಿಷಯ: ಕರ್ನಾಟಕ ವಿಧಾನ ಮಂಡಲ ಅಧಿವೇಶನ

ಪತ್ರಿಕೆಯ ಹೆಸರು: ವಿಶ್ವವಾಣಿ ದಿನಾಂಕ 18/02/2020

# ಪ್ರಲಾಪ ರಹಿತ ಕಲಾಪ ಆರಂಭ

← ಮೊದಲಪುಟದಿಂದ

ಮೂರೂ ಪಕ್ಷಗಳಿಂದ ಬೆರಳೆಣಿಕೆಯಷ್ಟು ಶಾಸಕರು ಗೈರಾಗಿದ್ದು ಬಿಟ್ಟರೆ, ಬಹುತೇಕರು ಹಾಜರಿದ್ದರು. ಈ ವೇಳೆ ನೂತನವಾಗಿ ಅಧಿಕಾರ ಸ್ವೀಕರಿಸಿದ ಸಚಿವರಿಗೆ ಮೂರೂ ಪಕ್ಷದ ಶಾಸಕರು ಅಭಿನಂದನೆ ಸಲ್ಲಿಸಿದರು. ಕೆಲ ತಿಂಗಳ ಹಿಂದೆ ಮೈಸೂರಿನಲ್ಲಿ ಮಾರಣಾಂತಿಕ ಹಲ್ಲೆಗೊಳಗಾಗಿದ್ದ ತನ್ವೀರ್ ಸೇಠ್ ಅವರು ಸದನದಲ್ಲಿ ಕಾಣಿಸಿಕೊಂಡರು. ಈ ವೇಳೆ ಸಚಿವರು, ಶಾಸಕರು ತನ್ವೀರ್ ಸೇಠ್ ಅವರ ಆರೋಗ್ಯ ವಿಚಾರಿಸಿದರು.

ಖಾಕಿ ಬಟ್ಟೆಯಲ್ಲಿ ಬೆಂಗಳೂರು ಪೊಲೀಸ್ ಆಯುಕ್ತ ಭಾಸ್ಕರ್ ರಾವ್ ವಿಧಾನಸಭೆ ಪ್ರವೇಶಿಸಿದ್ದು, ರಾಜ್ಯಪಾಲರ ಭಾಷಣದ ಮಧ್ಯೆಯೇ ಕನ್ನಡ ಭಾಷಣದ ಪ್ರತಿಗೆ ಜೆಡಿಎಸ್ ಶಾಸಕ ಅನ್ನದಾನಿ ಆಗ್ರಹಿಸಿದ್ದು, ಸಂತಾಪ ಸೂಚನಾ ನಿರ್ಣಯದಲ್ಲಿ ಸ್ಪೀಕರ್ ಕಾಗೇರಿ ಅವರು ಪ್ರಸ್ತಾಪಿಸದ ಹೆಸರುಗಳನ್ನು ಮುಖ್ಯಮಂತ್ರಿ ಯಡಿಯೂರಪ್ಪ ಅವರು ಸೇರಿಸಿ ಎಡವಟ್ಟು ಮಾಡಿಕೊಂಡಿದ್ದು ಬಿಟ್ಟರೆ ಯಾವುದೇ ಗೊಂದಲವಿಲ್ಲದೇ ಮೊದಲ ದಿನದ ಅಧಿವೇಶನ ಪೂರ್ಣವಾಗಿದೆ. ಮಂಗಳವಾರದಿಂದ ಆನಂದ್ ಸಿಂಗ್‌ಗೆ ಖಾತೆ ನೀಡಿದ ವಿಚಾರ, ಆರ್.ಅಶೋಕ ಪುತ್ರನ ಅಪಘಾತ ಪ್ರಕರಣ, ನೆರೆ ಪರಿಹಾರ, ಮಂಗಳೂರು ಗೋಲಿಬಾರ್ ಪ್ರಕರಣಗಳನ್ನಿಟ್ಟುಕೊಂಡು ಸರಕಾರವನ್ನು ತರಾಟೆ ತಗೆದುಕೊಳ್ಳುವ ಸಾಧ್ಯತೆ ಇದೆ.

**ರಾಜ್ಯಪಾಲರು ಹೇಳಿದ್ದೇನು?:** ಉಭಯ ಸದನವನ್ನು ಉದ್ದೇಶಿಸಿ ಮಾತನಾಡಿದ ರಾಜ್ಯಪಾಲ ವಿ.ಆರ್.ವಾಲಾ, ಮುಂದಿನ ದಿನಗಳಲ್ಲಿ 100 ಬರಪೀಡಿತ ತಾಲೂಕುಗಳಲ್ಲಿ 'ಬರ ನಿರ್ವಹಣಾ ಜಲಾನಯನ ಅಭಿವೃದ್ಧಿ' ಯೋಜನೆಯನ್ನು ಆರಂಭಿಸಲಾಗುವುದು ಎಂದು ಘೋಷಿಸಿದರು. ನೀರಾವರಿ ಇಲಾಖೆಗೆ ವಿವಿಧ ಯೋಜನೆಗಳಲ್ಲಿ ಸುಮಾರು ಏಳು ಸಾವಿರ ಕೋಟಿ ರು.ಗಳ ಆಡಳಿತಾತ್ಮಕ ಅನುದಾನ ಬಿಡುಗಡೆಗೊಳಿಸಿರುವುದು, 175 ಕೆರೆಗಳ ಭರ್ತಿಗೆ 496 ಕೋಟಿ ರು. ಅನುದಾನ ನೀಡಿರುವ ಬಗ್ಗೆ ವಿಸ್ತೃತವಾಗಿ ಮಾತನಾಡಿದರು. ಸಮಿಶ್ರ ಸರಕಾರದ ಅವಧಿಯಲ್ಲಿ ಸ್ಥಗಿತಗೊಳಿಸಲಾಗಿದ್ದ ಭಾಗ್ಯಲಕ್ಷ್ಮಿ ಬಾಂಡ್ ಪುನರ್ ಆರಂಭಿಸಲು ಹಾಗೂ 10 ಸಾವಿರ ಸ್ವ-ಸಹಾಯ ಗುಂಪುಗಳನ್ನು ಆರಂಭಿಸಲು ತೆಗೆದುಕೊಂಡಿರುವ ಕ್ರಮಗಳ ಬಗ್ಗೆ ಮಾತನಾಡಿದರು.

ಇನ್ನುಳಿದಂತೆ ನೆರೆ ಪರಿಹಾರದಲ್ಲಿ ಸರಕಾರ ತಗೆದುಕೊಂಡ ಕ್ರಮಗಳು, ಸೂರು ಒದಗಿಸಲು 2019ರ ಡಿಸೆಂಬರ್ ತನಕ ನಿರ್ಮಿಸಿರುವ 1.15 ಲಕ್ಷ ಮನೆ, ಕೃಷಿಕರಿಗೆ ಕೇಂದ್ರ ಸರಕಾರ ನೀಡುವ ಆರು ಸಾವಿರದೊಂದಿಗೆ ರಾಜ್ಯ ಸರಕಾರ ನೀಡುತ್ತಿರುವ ನಾಲ್ಕು ಸಾವಿರ ಪ್ರೋತ್ಸಾಹ ಧನದ ಬಗ್ಗೆ ಮಾತನಾಡಿದರು. ರಾಜ್ಯದಲ್ಲಿರುವ ಎಸ್‌ಸಿ, ಎಸ್‌ಟಿ ವರ್ಗದ ಅಭಿವೃದ್ಧಿಗೆ ರೂಪಿಸಿರುವ ಎಸ್‌ಸಿ, ಎಸ್‌ಟಿ, ಟಿಎಸ್‌ಪಿಗೆಂದು 30 ಸಾವಿರ ಕೋಟಿ ಹಂಚಿಕೆ ಮಾಡಿರುವ ಬಗ್ಗೆ ಪ್ರಸ್ತಾಪಿಸಿದರು.